

# ಸುಧಾರಿತ ಗೇರು ತಳಿಗಳು

(ಕರ್ನಾಟಕಕ್ಕೆ)




भाकृअनुप ICAR

ಐ.ಸಿ.ಎ.ಆರ್. - ಗೇರು ಸಂಶೋಧನಾ ನಿರ್ದೇಶನಾಲಯ

ಅಂಚೆ : ದರ್ಬೆ, ಪುತ್ತೂರು, ದ. ಕ., ಕರ್ನಾಟಕ – 574 202

काअनि DCR



# ಸುಧಾರಿತ ಗೇರು ತಳಿಗಳು

(ಕರ್ನಾಟಕಕ್ಕೆ)

ವಾಣಿಜ್ಯಕ ದೃಷ್ಟಿಯಿಂದ ಗೇರುಬೆಳೆಗೆ ಬಹಳ ಮಹತ್ವ ಬರುತ್ತಿದೆ. ಇದರ ಬೀಜ, ಹಣ್ಣು ಹಾಗೂ ಗೇರುಸಿಪ್ಪೆಯ ಎಣ್ಣೆ ಎಲ್ಲವೂ ಉಪಯುಕ್ತ. ಪ್ರಸ್ತುತ ಭಾರತದಲ್ಲಿ ಸುಮಾರು 10.08 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಾರೆ ಹಾಗೂ 7.37 ಲಕ್ಷ ಟನ್‌ಗಳಷ್ಟು ಗೇರುಬೀಜ ಉತ್ಪಾದನೆಯಾಗುತ್ತಿದೆ. ಆದರೆ 15ರಿಂದ 20 ಲಕ್ಷ ಟನ್ ಬೀಜ ಸಂಸ್ಕರಣೆಯ ಸಾಮರ್ಥ್ಯ ನಮ್ಮ ಕೈಗಾರಿಕಾ ಘಟಕಗಳಿಗಿದೆ. ಈ ನಿಟ್ಟಿನಲ್ಲಿ ಅಧಿಕ ಉತ್ಪಾದನೆ ಹಾಗೂ ಉತ್ಪಾದಕತೆಯ ಆವಶ್ಯಕತೆ ಹಿಂದೆಂದಿಗಿಂತ ಈಗ ಹೆಚ್ಚಾಗಿದೆ. ಉತ್ಪಾದಕತೆಯನ್ನು ಹೆಚ್ಚಿಸಲು ಸುಧಾರಿತ ತಳಿಗಳ ಕೃಷಿ ಅತ್ಯವಶ್ಯ. ಭಾರತದ ವಿವಿಧ ಪ್ರದೇಶಗಳಿಗೆ ಸೂಕ್ತವಾಗುವ 42 ತಳಿಗಳನ್ನು ಈವರೆಗೆ ಬಿಡುಗಡೆ ಮಾಡಲಾಗಿದೆ. ಈ ಕೆಳಗೆ ಕರ್ನಾಟಕಕ್ಕೆ ಶಿಫಾರಸ್ಸಾದ ಹಲವು ಸುಧಾರಿತ ತಳಿಗಳ ಮಾಹಿತಿ ಇದೆ.

## ಎನ್ ಆರ್ ಸಿ ಸಿ ಸೆಲೆಕ್ಷನ್ – 2 :



ಇದು 1989ರಲ್ಲಿ ಪುತ್ತೂರಿನ ಗೇರು ಸಂಶೋಧನಾ ಕೇಂದ್ರದಿಂದ ಬಿಡುಗಡೆಯಾದ ತಳಿ. ಅತೀ ಬೇಗನೆ ಅಕ್ಟೋಬರ್ – ನವೆಂಬರ್ ತಿಂಗಳಿನಲ್ಲಿ ಹೂಬಿಟ್ಟು ಸುಮಾರು 2ರಿಂದ 2½ ತಿಂಗಳು ಹೂ ಬಿಡುತ್ತಿರುತ್ತದೆ. ಒಂದು ಗೊಂಚಲಿನಲ್ಲಿ ಸರಾಸರಿ ಮೂರು ಹಣ್ಣುಗಳಿರುತ್ತವೆ. ಇದರ ಇಳುವರಿ 9 ಕೆ.ಜಿ. ಬೀಜದ ತೂಕ 9.2 ಗ್ರಾಂ. ಹಣ್ಣಿನ ಬಣ್ಣ ಕಂದು. ಕರಾವಳಿ ಪ್ರದೇಶಕ್ಕೆ ಸೂಕ್ತ. ಇದು ಸಾಂದ್ರ ಪದ್ಧತಿಗೆ ಹೊಂದುತ್ತದೆ.